# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 290 (330) |
| ಮಾನ್ಯ ಸದಸ್ಯರ ಹೆಸರು | : ಶ್ರೀ ಶಶೀಲ್ ಜಿ ನಮೋಶಿ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 29.01.2026 |
| ಉತ್ತರಿಸುವವರು | : ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ 2006ರ ನಂತರ ನೇಮಕಗೊಂಡ ಸರ್ಕಾರಿ ನೌಕರರಿಗೆ ಎನ್.ಪಿ.ಎಸ್ ಪಿಂಚಣಿ ಯೋಜನೆ ಬದಲಾಗಿ ಓ.ಪಿ.ಎಸ್. ನೀಡುವ ಬಗ್ಗೆ ಅಧ್ಯಯನ ಮಾಡಲು ಸಮಿತಿಯನ್ನು ರಚನೆ ಮಾಡಿದ್ದು ನಿಜವೇ; ಹಾಗಿದ್ದಲ್ಲಿ, ಸಮಿತಿ ಸದಸ್ಯರ ಪಟ್ಟಿ ನೀಡುವುದು;</td><td rowspan="6">ರಾಜ್ಯದಲ್ಲಿ ಜಾರಿಯಲ್ಲಿರುವ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ / ಮಾರ್ಪಾಡು ಮಾಡಲು ಸಮಗ್ರವಾಗಿ ಪರಿಶೀಲಿಸಲು ಈಗಾಗಲೇ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:11.12.2018ರ ಮತ್ತು ದಿನಾಂಕ:01.03.2023ರ ಸರ್ಕಾರಿ ಆದೇಶಗಳನ್ವಯ ರಚಿಸಲಾಗಿರುವ ಸಮಿತಿಯನ್ನು ದಿನಾಂಕ:16.08.2024ರಲ್ಲಿ ಪುನರ್ ರಚಿಸಿ ಆದೇಶಿಸಲಾಗಿರುತ್ತದೆ.<br><br>ಸಮಿತಿ ರಚಿಸಿರುವ ಆದೇಶಗಳ ಪ್ರತಿ ಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br><br>ಸಮಿತಿಗೆ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ.<br><br>ರಾಜ್ಯದ ವಿವಿಧ ಇಲಾಖೆಗಳಲ್ಲಿ ದಿನಾಂಕ:01.04.2006ರ ನಂತರ ನೇಮಕಗೊಂಡ ನೂತನ ಪಿಂಚಣಿಗೆ ಒಳಪಡುವ ನೌಕರರ ಸಂಖ್ಯೆ ದಿನಾಂಕ:31.12.2025ರ ಅಂತ್ಯಕ್ಕೆ ಒಟ್ಟು 2,92,793 (ಇಲಾಖಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ)<br><br>ಸಮಿತಿಯು ಇದುವರೆವಿಗೂ ನಾಲ್ಕು ಸಭೆಗಳನ್ನು ನಡೆಸಿದೆ.<br><br>ರಾಷ್ಟ್ರೀಯ ಪಿಂಚಣಿ ಯೋಜನೆಗೆ ಬದಲಾವಣೆ/ಮಾರ್ಪಾಡು ಮಾಡಿರುವ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಿಗೆ ಅಧಿಕಾರಿಗಳನ್ನೊಳಗೊಂಡ ತಂಡಗಳು ಅಧ್ಯಯನ ನಡೆಸಿ ವರದಿಗಳನ್ನು ಸಮಿತಿಗೆ ಸಲ್ಲಿಸಲಾಗಿದೆ. ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.</td></tr>
<tr><td>ಆ)</td><td>ಈ ಸಮಿತಿಗೆ ಅಂತಿಮ ವರದಿ ಸಲ್ಲಿಸಲು ನೀಡಿದ ಕಾಲಮಿತಿ ಎಷ್ಟು ಮತ್ತು ಸಮಿತಿಯು ಇಲ್ಲಿಯವರೆಗೆ ಪ್ರಿಲಿಮಿನರಿ ರಿಪೋರ್ಟ್ ನೀಡಿದೆಯೇ;</td></tr>
<tr><td>ಇ)</td><td>ರಾಜ್ಯದ ವಿವಿಧ ಇಲಾಖೆಗಳಲ್ಲಿ 01.04.2006ರ ನಂತರ ನೇಮಕಗೊಂಡ ನೌಕರರ ಸಂಖ್ಯೆ ಎಷ್ಟು (ವಿವರ ನೀಡುವುದು);</td></tr>
<tr><td>ಈ)</td><td>ಈ ಸಮಿತಿಯು ಅನುಸರಿಸುತ್ತಿರುವ ಟರ್ಮ್ಸ್ ಆಫ್ ರೆಫರೆನ್ಸ್‌ಗಳೇನು;<br>(ಮಾಹಿತಿ ನೀಡುವುದು)</td></tr>
<tr><td>ಉ)</td><td>ಈ ಸಮಿತಿಗೆ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೂ ಪಿಂಚಣಿ ಸೌಲಭ್ಯ ನೀಡುವ ಬಗ್ಗೆ ಅಧ್ಯಯನ ಮಾಡಲು ಸೂಚನೆ ನೀಡಲಾಗಿದೆಯೇ;<br>(ಮಾಹಿತಿ ನೀಡುವುದು)</td></tr>
<tr><td>ಊ)</td><td>ಈ ಸಮಿತಿಯು ಇಲ್ಲಿಯವರೆಗೆ ನಡೆಸಿದ ಸಭೆಗಳು ಎಷ್ಟು; ಈ ಕುರಿತು ಬೇರೆ ರಾಜ್ಯಗಳಿಗೆ ತೆರಳಿ ಸದರಿ ವಿಷಯ ಕುರಿತು ಮಾಹಿತಿಯನ್ನು ಸಂಗ್ರಹಿಸಲಾಗಿದೆಯೇ?<br>(ವಿವರ ನೀಡುವುದು)</td></tr>
</table>

**ಸಂಖ್ಯೆ:ಆಇ-ಪಿಇಎನ್/25/2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ - 1

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ-ಪಿಇಎನ್/89/2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 03.07.2025

**ತಿದ್ದುಪಡಿ ಆದೇಶ**

ಸರ್ಕಾರಿ ಆದೇಶ ಸಂಖ್ಯೆ: ಆಇ-ಪಿಇಎನ್/89/2023, ದಿನಾಂಕ:16.8.2024ರಲ್ಲಿ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 11.12.2018ರ ಮತ್ತು ದಿನಾಂಕ: 01.03.2023 ರ ಸರ್ಕಾರಿ ಆದೇಶಗಳನ್ವಯ ರಚಿಸಲಾಗಿರುವ ಸಮಿತಿಯನ್ನು ಪುನರ್ ರಚಿಸಿ ಆದೇಶಿಸಲಾಗಿದೆ.

ಸದರಿ ಆದೇಶದಲ್ಲಿ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದ ಶ್ರೀ ಅಂಜುಂ ಪರ್ವೇಜ್, ಭಾ.ಆ.ಸೇ., ಇವರ ಬದಲಾಗಿ ಶ್ರೀಮತಿ ಉಮಾ ಮಹಾದೇವನ್, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ರವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ.

ಮುಂದುವರೆದು, ಸದರಿ ಆದೇಶದಲ್ಲಿ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದ್ದ ಶ್ರೀ ರಿತೇಶ್ ಕುಮಾರ್ ಸಿಂಗ್, ಭಾ.ಆ.ಸೇ., ರವರ ಬದಲಾಗಿ ಡಾ|| ಏಕ್‌ರೂಪ್ ಕೌರ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರನ್ನು ಸಮಿತಿಯ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ.

ಇನ್ನುಳಿದಂತೆ ದಿನಾಂಕ:16.8.2024ರ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

3/7/2025
(ಅರುಣ್ ಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಸಮನ್ವಯ)

ಪ್ರತಿ:

1. ಮಹಾಲೇಖಪಾಲರು (ಎ & ಇ), ಕರ್ನಾಟಕ, ಪೋಸ್ಟ್ ಬಾಕ್ಸ್ ಸಂಖ್ಯೆ:5329/5369, ಪಾರ್ಕ್‌ಹೌಸ್ ರೋಡ್ ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಬೆಂಗಳೂರು.
3. ಶ್ರೀಮತಿ ಉಮಾ ಮಹಾದೇವನ್, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ಬೆಂಗಳೂರು.
4. ಶ್ರೀ ಅಂಜುಂ ಪರ್ವೇಜ್, ಭಾ.ಆ.ಸೇ., ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ

ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

5. ಶ್ರೀ ರಿತೇಶ್ ಕುಮಾರ್ ಸಿಂಗ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
6. ಡಾ|| ಏಕ್‌ರೂಪ್ ಕೌರ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು.
7. ಸಮಿತಿಯ ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳು.
8. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು (ಆ ಮತ್ತು ಸಂ)/ ಸರ್ಕಾರದ ಕಾರ್ಯದರ್ಶಿಗಳು (ವಿತ್ತೀಯ ಸುಧಾರಣೆ)/ ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ) ರವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
10. ಕಛೇರಿ ಪ್ರತಿ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**<u>ಕರ್ನಾಟಕ ಸರ್ಕಾರದ ನಡವಳಿಗಳು</u>**

ವಿಷಯ: ರಾಜ್ಯದಲ್ಲಿ ಜಾರಿಯಲ್ಲಿರುವ ರಾಷ್ಟ್ರೀಯ ಪಿಂಚಣಿ ಯೋಜನೆಯ ಬದಲಾಗಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಮಾಡುವ ಸಾಧ್ಯತೆಗಳ ಕುರಿತು ಪರಿಶೀಲಿಸಲು ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂ: ಆಇ 04 ಪಿಇಟಿ 2005, ದಿನಾಂಕ: 31.03.2006.
2.ಸರ್ಕಾರಿ ಆದೇಶ ಸಂ: ಆಇ 107 ಪಿಇಎನ್ 2018, ದಿನಾಂಕ: 11.12.2018.
3. ಸರ್ಕಾರಿ ಆದೇಶ ಸಂ: ಆಇ-ಪಿಇಎನ್/89/2023, ದಿನಾಂಕ: 01.03.2023.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ, ಕರ್ನಾಟಕ ರಾಜ್ಯದಲ್ಲಿ ದಿನಾಂಕ 01.04.2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರಿರುವ ಎಲ್ಲಾ ನೌಕರರಿಗೆ ಕಡ್ಡಾಯವಾಗಿ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ, ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ಮಾರ್ಪಾಡು ಮಾಡಲು ಪರಿಶೀಲಿಸಲು ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಹಳೆಯ ಪಿಂಚಣಿ ಯೋಜನೆ (Defined Pension Scheme) ಯನ್ನು ಮರು ಜಾರಿ ಮಾಡಿರುವ ರಾಜ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಕುರಿತು ಕೈಗೊಂಡಿರುವ ಕ್ರಮದ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಆದೇಶಿಸಲಾಗಿದೆ.

ಪ್ರಸ್ತುತ ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ ರಾಜ್ಯ ಸರ್ಕಾರಕ್ಕೆ ಸೂಕ್ತ ವರದಿಯನ್ನು ಸಲ್ಲಿಸಲು ಅನುವಾಗುವಂತೆ ಸಮಿತಿಯನ್ನು ಪುನರ್ ರಚಿಸುವುದು ಅಗತ್ಯವೆಂದು ಸರ್ಕಾರವು ಮನಗಂಡಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಆಇ-ಪಿಇಎನ್/89/2023 ಬೆಂಗಳೂರು, ದಿನಾಂಕ:16.08.2024</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 11.12.2018ರ ಮತ್ತು ದಿನಾಂಕ: 01.03.2023 ರ ಸರ್ಕಾರಿ ಆದೇಶಗಳನ್ವಯ ರಚಿಸಲಾಗಿರುವ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಿದೆ:-

| | | |
|---|---|---|
| 1. | ಶ್ರೀ ಅಂಜುಂ ಪರ್ವೇಜ್, ಭಾ.ಆ.ಸೇ.,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. | ಅಧ್ಯಕ್ಷರು |
| 2. | ಶ್ರೀ ರಿತೇಶ್ ಕುಮಾರ್ ಸಿಂಗ್, ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ. | ಸದಸ್ಯರು |

| | | |
|---|---|---|
| 3. | ಶ್ರೀ ಅಮಲಾನ್ ಆದಿತ್ಯ ಬಿಸ್ವಾಸ್, ಭಾ.ಆ.ಸೇ.,<br>ಪ್ರಾದೇಶಿಕ ಆಯುಕ್ತರು,<br>ಬೆಂಗಳೂರು ವಿಭಾಗ. | ಸದಸ್ಯರು |
| 4. | ಡಾ|| ವಿಶಾಲ್ ಆರ್., ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿ (ವಿತ್ತೀಯ ಸುಧಾರಣೆ),<br>ಆರ್ಥಿಕ ಇಲಾಖೆ. | ಸದಸ್ಯರು |
| 5. | ಡಾ|| ಎಂ.ಟಿ. ರೇಜು, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿ (ವೆಚ್ಚ),<br>ಆರ್ಥಿಕ ಇಲಾಖೆ. | ಸದಸ್ಯ ಕಾರ್ಯದರ್ಶಿ |

ಸಮಿತಿಯು ಈಗಾಗಲೇ ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಯನ್ನು ಮರು ಜಾರಿ ಮಾಡಿರುವ ರಾಜ್ಯಗಳಲ್ಲಿ, ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಕುರಿತು ಕೈಗೊಂಡಿರುವ ಕ್ರಮದ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸೂಚಿಸಿದೆ.

ಮುಂದುವರೆದು, ಸಮಿತಿಯು ತನ್ನದೇ ಆದ ಕಾರ್ಯವಿಧಾನಗಳನ್ನು ರೂಪಿಸಿಕೊಳ್ಳುವಲ್ಲಿ ಸಕ್ಷಮವಾಗಿರುತ್ತದೆ. ಸಮಿತಿಯ ಪರಿಶೀಲನೆಗೊಳಪಟ್ಟ ಅಂಶಗಳಿಗೆ ಅಗತ್ಯವೆನಿಸಿದ ಮಾಹಿತಿಗಳನ್ನು ಒದಗಿಸಲು ಸರ್ಕಾರದ ಎಲ್ಲಾ ಇಲಾಖೆಗಳು ನಿಗಧಿತ ಕಾಲಮಿತಿಯೊಳಗೆ ಸೂಕ್ತ ನೆರವು ನೀಡುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

16/8/2024

(ಅರುಣ್ ಕುಮಾರ್ ಕೆ.ಎ.ಎಸ್.)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಸಮನ್ವಯ)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

ಪ್ರತಿ:

1. ಮಹಾಲೇಖಪಾಲರು (ಎ & ಇ), ಕರ್ನಾಟಕ, ಪೋಸ್ಟ್ ಬಾಕ್ಸ್ ಸಂಖ್ಯೆ:5329/5369, ಪಾರ್ಕ್‌ಹೌಸ್ ರೋಡ್, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸಮಿತಿಯ ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳು.
6. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಆ ಮತ್ತು ಸಂ)/ ಸರ್ಕಾರದ ಕಾರ್ಯದರ್ಶಿಗಳು (ವಿತ್ತೀಯ ಸುಧಾರಣೆ)/ಕಾರ್ಯದರ್ಶಿಗಳು (ವೆಚ್ಚ) ರವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
8. ಕಛೇರಿ ಪ್ರತಿ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಜಾರಿಯಲ್ಲಿರುವ ರಾಷ್ಟ್ರೀಯ ಪಿಂಚಣಿ ಯೋಜನೆಯ ಬದಲಾಗಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಮಾಡುವ ಸಾಧ್ಯತೆಗಳ ಕುರಿತು.

ಓದಲಾಗಿದೆ: ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಇವರ ಮನವಿ ದಿನಾಂಕ: 21.02.2023

ಪ್ರಸ್ತಾವನೆ:-

ಕರ್ನಾಟಕ ರಾಜ್ಯದಲ್ಲಿ ದಿನಾಂಕ:01.04.2006. ರ ನಂತರ ಸರ್ಕಾರಿ ಸೇವೆಗೆ ಸೇರಿರುವ ನೌಕರರಿಗೆ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ. ಮೇಲೆ ಓದಲಾದ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರ ದಿನಾಂಕ: 21.02.2023 ಮನವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಜಾರಿಯಲಿರುವ ಸರ್ಕಾರಿ ನೌಕರರ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ದೇಶದ ಹಲವು ರಾಜ್ಯಗಳು ರಾಷ್ಟ್ರೀಯ ಪಿಂಚಣಿ ಯೋಜನೆಯ ಬದಲಾಗಿ ಈ ಹಿಂದೆ ಜಾರಿಯಲ್ಲಿದ್ದ ಹಳೆಯ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸಿರುತ್ತವೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲೂ ಸಹ ರಾಷ್ಟ್ರೀಯ ಪಿಂಚಣಿ ಯೋಜನೆಯ ಬದಲಾಗಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುವಂತೆ ಸರ್ಕಾರವನ್ನು ಕೋರಿರುತ್ತಾರೆ.

ರಾಜ್ಯ ಸರ್ಕಾರಿ ನೌಕರರ ಸಂಘದ ಮನವಿಯನ್ನು ಪರಿಶೀಲಿಸಿದ ಸರ್ಕಾರವು ಈಗಾಗಲೇ ಹಳೆಯ ಪಿಂಚಣಿ ಯೋಜನೆ(Defined Pension Scheme)ಯನ್ನು ಮರು ಜಾರಿ ಮಾಡಿರುವ ರಾಜ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಕುರಿತು ಕೈಗೊಂಡಿರುವ ಕ್ರಮದ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸುತ್ತದೆ.

### ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/ 89/ 2023 ಬೆಂಗಳೂರು, ದಿನಾಂಕ: 01 ಮಾರ್ಚ್ 2023

ಪ್ರಸ್ತಾವನೆಯನ್ನು ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ನೌಕರರ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಹಳೆಯ ಪಿಂಚಣಿ ಯೋಜನೆ(Defined Pension Scheme)ಯನ್ನು ಮರು ಜಾರಿ ಮಾಡಿರುವ ರಾಜ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಕುರಿತು ಕೈಗೊಂಡಿರುವ ಕ್ರಮದ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಆದೇಶಿಸಿದೆ.

ಮುಂದುವರೆದು, ಸಮಿತಿಯು ರಾಷ್ಟ್ರೀಯ ಪಿಂಚಣಿ ಯೋಜನೆಯ ಸೌಲಭ್ಯವನ್ನು ಸ್ಥಗಿತಗೊಳಿಸಿ ಹಳೆಯ ಪಿಂಚಣಿ ಯೋಜನೆಯನ್ನು ಪುನರ್ ಸ್ಥಾಪಿಸುವ ನಿರ್ಧಾರಗಳನ್ನು ಕೈಗೊಂಡಿರುವ ರಾಜ್ಯಗಳಿಗೆ ಭೇಟಿ ನೀಡಿ ಸೂಕ್ತ ಅಧ್ಯಯನ ನಡೆಸಿ ಎರಡು ತಿಂಗಳೊಳಗೆ ವರದಿಯನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

1/3/2023
(ಅರುಣ್ ಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ(ಆಡಳಿತ ಮತ್ತು ಸಮನ್ವಯ)

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.

2) ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು.
4) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಕಾರ್ಯದರ್ಶಿ(ಆ ಮತು ಸಂ)/ ಕಾರ್ಯದರ್ಶಿ(ವೆಚ್ಚ)ರವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು
7) ಕಛೇರಿ ಪ್ರತಿ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನೂತನ ಪಿಂಚಣಿ ಯೋಜನೆ – ಅಧಿಕಾರಿಗಳ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ:-

1) ಸ.ಆ.ಸಂಖ್ಯೆ: ಆಇ(ಸ್ಪೆಷಲ್) 04 ಪಿಇಟ 2005 ದಿನಾಂಕ:31.3.2006.

2) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೆಂಗಳೂರುರವರ ಮನವಿ ದಿನಾಂಕ: 29.11.2018 ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ನೂತನ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರ ಸಂಘ(ರಿ), ಬೆಂಗಳೂರು ರವರ ದಿನಾಂಕ:6.12.2018.

ಪ್ರಸ್ತಾವನೆ:-

ಮೇಲೆ ಓದಲಾದ ಸರ್ಕಾರಿ ಆದೇಶ (1) ರಲ್ಲಿ ದಿನಾಂಕ: 01.4.2006ರ ಮತ್ತು ನಂತರ ಹಾಗೂ ತದನಂತರ ಸರ್ಕಾರಿ ಸೇವೆಗೆ ಸೇರುವ ನೌಕರರಿಗೆ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯನ್ನು ಕಡ್ಡಾಯಗೊಳಿಸಲಾಗಿದೆ.

ವಿವಿಧ ಸಂಘ ಸಂಸ್ಥೆಗಳು ಹೊಸ ಪಿಂಚಣಿ ಯೋಜನೆಯಲ್ಲಿ ಮಾರ್ಪಾಡು/ಬದಲಾವಣೆ ಮಾಡಲು ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಲು ಅಧಿಕಾರಿಗಳ ಸಮಿತಿಯನ್ನು ರಚಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಆಇ 107 ಪಿಇಎನ್ 2018, ಬೆಂಗಳೂರು, ದಿನಾಂಕ:11.12.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ಮಾರ್ಪಾಡು ಮಾಡಲು, ಈ ಕೆಳಕಂಡ ಅಧಿಕಾರಿಗಳ ಸಮಿತಿಯನ್ನು ರಚಿಸಲು ಸರ್ಕಾರವು ಹರ್ಷಿಸುತ್ತದೆ:-

| | | |
|---|---|---|
| 1. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಅಧ್ಯಕ್ಷರು |
| 2. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆ.ಸು.ಇ (ಆಡಳಿತ ಸುಧಾರಣೆ) | ಸದಸ್ಯರು |
| 3. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆ ಮತ್ತು ಸಂ) | ಸದಸ್ಯರು |
| 4. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ | ಸದಸ್ಯರು |
| 5. | ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು.ಇಲಾಖೆ | ಸದಸ್ಯರು |

| | | |
|---|---|---|
| 6. | ಸರ್ಕಾರದ ಕಾರ್ಯದರ್ಶಿ(ವೆಚ್ಚ)<br>ಆರ್ಥಿಕ ಇಲಾಖೆ | ಸದಸ್ಯರು |
| 7. | ಸರ್ಕಾರದ ಜಂಟಿ ಕಾರ್ಯದರ್ಶಿ<br>ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ) | ಸಂಚಾಲಕರು |

ಸಮಿತಿಯು ತನ್ನದೇ ಆದ ಕಾರ್ಯವಿಧಾನಗಳನ್ನು ರೂಪಿಸಿಕೊಳ್ಳುವುದು ಹಾಗೂ ಪರಿಶೀಲನಾರ್ಹ ಅಂಶಗಳಿಗೆ ಅಗತ್ಯವೆನಿಸಿದ ಮಾಹಿತಿಗಳನ್ನು ವಿವಿಧ ಮೂಲಗಳಿಂದ ಪಡೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11.12.

(ಪ್ರಕಾಶ್.ವೈ.ಕೆ)
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ(ವಿಶ್ರಾಂತಿ ವೇತನ).

ಇವರಿಗೆ:

1) ಸರ್ಕಾರದ ಮುಖ್ಯ ಕಾರ್ಯದರ್ಶಿ/ ಅಪರ ಮುಖ್ಯ ಕಾರ್ಯದರ್ಶಿಗಳು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3) ಮಹಾಲೇಖಪಾಲರು (ಲೆಕ್ಕಪತ್ರ / ಲೆಕ್ಕಪರಿಶೋಧನೆ) ಜಿ.ಎಂ ಶಾಖೆ , ಬೆಂಗಳೂರು.
4) ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ.
5) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
6) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
7) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
8) ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
10) ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು.,
11) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
12) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
14) ಉಪನಿರ್ದೇಶಕರು, ನೂತನ ಪಿಂಚಣಿ ಘಟಕ, ಖಜಾನೆ ಇಲಾಖೆ, ಬೆಂಗಳೂರು.
15) ಸಂಕಲನಕಾರರು, ಕರ್ನಾಟಕ ಗೆಜೆಟ್‌ನ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ.
16) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ.
17) ಅಧ್ಯಕ್ಷರು. ಕರ್ನಾಟಕ ರಾಜ್ಯ ನೂತನ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರ ಸಂಘ, ಬೆಂಗಳೂರು.
18) ಕರ್ನಾಟಕ ಸರ್ಕಾರದ ಸಚಿವಾಲಯದ ಎಲ್ಲಾ ಶಾಖೆಗಳು.
19) ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ,
20) ವಾರಪತ್ರ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಂತರ್ಜಾಲತಾಣ:
www.finance.kar.nic.in ವೀಕ್ಷಿಸಿ

ಅನುಬಂಧ - 2

**ANNEXURE**

ದಿನಾಂಕ:01.04.2006ರ ನಂತರ ನೇಮಕಗೊಂಡ ನೌಕರರ ವಿವರಗಳು ಈ ಕೆಳಕಂಡತಿದೆ

| DEPT_CD | DEPT_NAME | EMP_COUNT |
|---|---|---|
| AC | Ac-Public Works Department (Architecture Wing) | 10 |
| AD | AD-DEPARTMENT OF ADVOCATE GENERAL | 146 |
| AH | AH-DEPT OF ANIMAL HUSBANDARY & VET SERVICE | 738 |
| AHU | AHU-KARNATAKA VETERINARY ANIMAL AND FISHERIES SCIENCE UNIVERSITY | 4 |
| AJ | AJ-HIGH COURT & SUBORDINATE COURTS | 11857 |
| AL | AL-DEPT OF AGRICULTURE | 1231 |
| AM | AM-DEPARTMENT OF AGRICULTURAL MARKETING | 494 |
| AR | AR-DEPARTMENT OF ARCHAEOLOGY, MUSEUMS AND HERITAGE | 37 |
| AT | AT-ADMINISTRATIVE TRANING INSTITUTE MYSORE | 99 |
| AV | AV-KARNATAKA STATE ARCHIVES | 22 |
| BCC | Backward Classess Commission | 5 |
| BDA | BDA-BANGALORE DEVELOPMENT AUTHORITY | 3 |
| BW | BW-DEPARTMENT OF BACKWARD CLASSES | 52 |
| CA | Ca-Co Operative Audit Department | 246 |
| CD | Cd-Co-Operative Department Election Authority | 4 |
| CH | Directoriate Of Child Protection | 165 |
| CN | CN-KARNATAKA STATE CONSUMER DISPUTE REDRESSAL COMMISSION | 100 |
| CO | CO-Directorate Of Command Area Development Authorities | 14 |
| COA | Cada Directoriate | 32 |
| CR | Karnataka State Child Rights Protection Commission | 1 |
| CS | CS-DEPARTMENT OF CO-OPERATIVE SOCIETIES | 630 |
| CSS | Registrar Of Co-Operative Societies | 8 |
| CT | CT-DEPARTMENT OF COMMERCIAL TAX | 1744 |
| DP | DP-SECRETARY, DPAR(ACCOUNTS) | 1266 |
| DPC | Karnataka Decentralized Planning And Development Committee | 1 |
| DPS | DPS-CENTER FOR E GOVERNANCE | 6 |
| DR | DR-DRUGS CONTROLLER DEPARTMENT | 311 |
| DS | DS-D.P.I., D.S.E.R.T. | 489 |
| DW | DW-DEPARTMENT OF WELFARE OF DISABLED | 116 |
| EC | EC-DEPARTMENT OF COLLEGIATE EDUCATION | 6732 |
| ED | Directorate Of Edcs & E Governance | 5 |
| EGC | EGC-ELECTRICITY REGULATORY COMMISSION | 34 |
| EI | EI-CHIEF ELECTRICAL INSPECTOR ELECTRICAL INSPECTORATE | 187 |
| EM | EM-DEPARTMENT OF MASS EDUCATION | 28 |
| EN | EN-ENDOWMENT AND MUZRAI DEPARTMENT | 96 |
| EP | EP-DEPARTMENT OF SCHOOL EDUCATION | 11823 |
| ES | ES-DEPARTMENT OF SECONDARY EDUCATION | 7481 |
| ET | ET-DEPARTMENT OF TECHNICAL EDUCATION | 2281 |
| EX | EX-STATE EXCISE DEPARTMENT | 2352 |
| EY | EY-DIRECTORATE OF EMPLOYMENT AND TRAINING | 2209 |
| FB | FB-DEPARTMENT OF FACTORIES AND BOILERS | 92 |
| FC | FC-DEPARTMENT OF FOOD AND CIVIL SUPPLIES | 229 |
| FI | FI-DEPARTMENT OF FISHERIES | 153 |
| FL | FL- GOVERNMENT FLYING TRAINING SCHOOL | 2 |
| FO | Fo-Forest Department | 6160 |
| FP | FP-FISCAL POLICY DIRECTORATE | 10 |
| FR | FR-DEPARTMENT OF FIRE SERVICES | 4292 |
| FW | FW-DEPT OF HEALTH & FAMILY WELFARE | 8402 |
| FWI | Medical Education Institutions | 450 |
| FWM | National Health Mission | 1 |
| FWT | FWT-SUVARNA WELFARE TRUST | 1 |
| GU | GU-SPECIAL OFFICER GOVERNMENT GUEST HOUSES | 41 |
| GW | Directorate Of Ground Water | 40 |
| GZ | GZ-CHIEF EDITOR, KARNATAKA GAZETTEER | 1 |
| HC | High Court Of Karnataka | 1767 |
| HD | Hrms 2 Directorate | 4 |
| HDB | HDB-KARNATAKA HOUSING BOARD | 4 |
| HG | HG-DEPARTMENT OF HOME GUARDS, CIVIL DEFENCE AND FIRE FORCE | 151 |
| HO | HO-DEPARTMENT OF HORTICULTURE | 1222 |
| HOB | Horticulture Boards | 8 |

| | | |
|---|---|---|
| HOC | HOC-MANGO DEVELOPMENT AND MARKETING CORPORATION | 7 |
| HR | Karnataka State Human Rights Commission | 10 |
| IC | IC-DEPARTMENT OF INDUSTRIES & COMMERCE | 111 |
| ICC | Icc-Small Industries Development Corporation Limited | 13 |
| IFA | IFA- AREA PLANNING AUTHORITY | 3 |
| IFC | IFC-KARNATAKA URBAN INFRASTRUCTURE DEVELOPMENT AND FINANCE CORPORATION LIMITED | 7 |
| IL | IL-Dpar(Accounts-IRLA) | 146 |
| IM | IM-AYURVEDA, YOGA AND NATUROPATHY, UNANI ,SIDDHA AND HOMEOPATHY (AYUSH) | 421 |
| IN | IN-DEPARTMENT OF INFORMATION AND PUBLICITY | 93 |
| IR | IR-IRRIGATION DEPARTMENT | 513 |
| IS | IS-Department of ESIS Medical service | 549 |
| IT | IT-INFORMATION TECHNOLOGY DEPARTMENT | 2 |
| KA | Karnataka State Administrative Tribunal | 168 |
| KB | KB-KARNATAKA BHAVAN, NEW DELHI | 62 |
| KBC | Karnataka Beverages Corporation Ltd., | 19 |
| KC | KC-DEPARTMENT OF KANNADA AND CULTURE | 65 |
| KG | KG-KARNATAKA GOVT. INSURANCE DEPARTMENT | 401 |
| KI | KI-KARNATAKA INFORMATION COMMISSION | 8 |
| KL | Karnataka Law Commission | 1 |
| KT | Kt-Karnataka State Appelate Tribunal | 38 |
| KV | Kv - Karnataka Vartha Kendra New Delhi | 2 |
| LA | LA-LEGISLATIVE ASSEMBLY SECRETARIAT | 603 |
| LB | LB-DEPARTMENT OF LABOUR | 280 |
| LBB | Karnataka Building And Other Construction Workers Welfare Board | 10 |
| LC | LC-KARNATAKA LEGISLATIVE COUNCIL SECRETARIAT | 121 |
| LDA | Karnataka Legal Services Authority | 2 |
| LI | LI-DEPARTMENT OF PUBLIC LIBRARIES | 507 |
| LM | LM-CONTROLLER OF LEGAL METROLOGY | 81 |
| LO | LO-KARNATAKA LOKAYUKTA | 764 |
| LR | LR-DEPARTMENT OF SURVEY AND SETTLEMENT | 3291 |
| LW | Karnataka Law Reporting Council | 2 |
| ME | ME-DIRECTORATE OF HEALTH & FAMILY WELFARE | 6 |
| MI | MI-DEPARTMENT OF MINES AND GEOLOGY | 423 |
| MN | MN-DEPARTMENT OF MINORITIES | 2114 |
| MR | MR-DEPARTMENT OF MINOR IRRIGATION | 752 |
| MU | MU-DIRECTOR OF MUNICIPAL ADMINISTRATION | 235 |
| MV | MV-COMMISSIONER OF TRANSPORTS | 862 |
| MVC | MVC-DEPT OF BOARDS AND CORPORATION | 5 |
| NC | NC-N.C.C. | 244 |
| PC | PC-KARNATAKA PUBLIC SERVICE COMMISSION | 102 |
| PH | Ph-Department Of Panchayatraj Engineering | 357 |
| PI | PI-COMMISSIONER FOR SCHOOL EDUCATION | 824 |
| PL | PL-DEPARTMENT OF PLANNING | 1 |
| PM | PM-RURAL DRINKING WATER AND SANITATION DEPARTMENT | 885 |
| PN | PN-DEPARTMENT OF PROSECUTION | 628 |
| PO | Po-Police Department | 67360 |
| PP | PP-DIRECTOR POPULATION CENTER | 1 |
| PR | PR-DEPARTMENT OF PRISONS | 2479 |
| PRI | Panchayat Raj Institution | 25 |
| PS | PS-DEPARTMENT OF PRINTING AND STATIONERY | 196 |
| PT | PT-DEPARTMENT OF PORTS AND INLAND WATER TRANSPORT - KARWAR | 28 |
| PU | PU-PRE-UNIVERSITY BOARD | 5330 |
| PW | PW-PUBLIC WORKS DEPARTMENT | 2998 |
| QA | QA-DEPARTMENT OF AGRICULTURE | 260 |
| QB | QB-DEPARTMENT OF BACKWARD CLASSES AND MINORITIES (TP) | 4593 |
| QE | QE-DEPARTMENT OF SCHOOL EDUCATION | 49365 |
| QH | QH-DEPARTMENT OF HEALTH AND FAMILY WELFARE | 558 |
| QO | QO-DEPARTMENT OF HORTICULTURE (TP) | 28 |
| QQ | QQ-EXECUTIVE OFFICERS(TALUKA PANCHAYAT) | 11960 |
| QR | QR-DEPARTMENT OF FISHERIES (TP) | 4 |
| QS | Qs-Department Of Social Welfare (Tp) | 3025 |
| QV | QV-ANIMAL HUSBANDRY AND VETERINARY SERVICES | 1481 |
| QW | Department Of Women And Child Welfare | 1017 |
| RB | RB-SECRETARY, RAJBHAVAN | 45 |

| | | |
|---|---|---|
| RD | RD-REVENUE DEPARTMENT | 13625 |
| RDC | Revenue Dept Boards And Corporations | 2 |
| RDU | Karnataka State Rural Development And Panchyat Raj University | 1 |
| RP | Rural Development And Panchayat Raj Department | 53 |
| SA | SA-KARNATAKA STATE AUDIT AND ACCOUNTS DEPARTMENT | 589 |
| SC | SC-STATE ELECTION COMMISSION | 12 |
| SD | SD-STATE DISASTER RESPONCE FORCE | 220 |
| SE | SE-COMMISSIONER FOR SERICULTURE DEVELOPMENT AND DIRECTOR OF SERICULTURE | 553 |
| SG | SG-COMMISSIONER FOR CANE DEVELOPMENT AND DIRECTOR OF SUGAR | 3 |
| SI | SI-DIRECTOR SECRETARIAT TRAINING INSTITUTE | 4 |
| SN | SN-DIRECTOR, SAINIK WELFARE | 34 |
| SR | SR-DEPARTMENT OF STAMPS AND REGISTRATION | 478 |
| SS | SS-DEPARTMENT OF SMALL SAVINGS AND STATE LOTTERIES | 112 |
| ST | Department Of Economics And Statistics | 498 |
| SW | SW-DEPARTMENT OF SOCIAL WELFARE | 100 |
| SWS | Karnataka Residential Educational Institutions Society | 3 |
| SY | Sy-Directorate Of Youth Empowerment And Sports | 43 |
| TA | TA-DEPARTMENT OF TREASURIES | 1362 |
| TL | TL-TRANSLATION DEPARTMENT | 33 |
| TP | TP-DEPARTMENT OF TOWN & COUNTRY PLANNING | 325 |
| TT | TT-TRANSPORT APPELLATE TRIBUNAL | 3 |
| TU | TU-DEPARTMENT OF TOURISM | 52 |
| TW | TW-DIRECTORATE OF TRIBAL WELFARE | 216 |
| TX | Tx-Department Of Handloom And Textile | 112 |
| UD | UD-BANGLORE METROPOLITON TASK FORCE | 37 |
| UDA | Uda-Urban Development Authority | 12 |
| UDP | Urban Development Dept | 12 |
| UDS | Urban Development (Smart City Wing) | 1 |
| WDN | Krishna Bhagya Jala Nigam Ltd | 1210 |
| WRC | Karnataka Neervari Nigam Limited | 1567 |
| WRL | Cauvery Neeravari Nigama Ltd | 755 |
| WS | WS-DEPARTMENT OF WATERSHED DEVELOPMENT | 128 |
| WVN | Visvesvaraya Jala Nigama Limited | 317 |
| WW | Dept Of Women And Child Welfare | 290 |
| ZA | ZA-DEPARTMENT OF AGRICULTURE(ZP) | 712 |
| ZB | ZB-DEPARTMENT OF BACKWARD CLASSES AND MINORITIES(ZP) | 398 |
| ZE | ZE-DEPARTMENT OF SCHOOL EDUCATION(ZP) | 3409 |
| ZF | Zf-Karnataka Department Of Forest(Zp) | 594 |
| ZH | ZH-DEPARTMENT OF HEALTH AND FAMILY WELFARE | 16182 |
| ZI | ZI-INDUSTRIAL DEV AND DIRECTOR OF INDUSTRIES AND COMMERCE (ZP) | 41 |
| ZO | ZO-DEPARTMENT OF HORTICULTURE (ZP) | 1399 |
| ZP | ZP-DEPARTMENT OF PUBLIC WORKS (ZP) | 634 |
| ZR | ZR-DEPARTMENT OF FISHERIES (ZP) | 226 |
| ZS | ZS-DEPARTMENT OF SOCIAL WELFARE (ZP) | 188 |
| ZU | ZU- AYURVEDA, YOGA AND NATUROPATHY, UNANI ,SIDDHA AND HOMEOPATHY (AYUSH) (ZP) | 544 |
| ZV | ZV-DEPARTMENT OF ANIMAL HUSBANDRY AND VETERINARY SERVICES | 1531 |
| ZW | Women & Child Development Department (Zp) | 434 |
| ZY | Zy-Directorate Of Youth Empowerment And Sports (Z.P) | 37 |
| ZZ | ZZ-CHIEF EXECUTIVE OFFICER (ZILLA PANCHAYATH) | 1122 |
| | Total | 292793 |

**Please Note:** The list is an extract from HRMS data base as entered by DDO in the system till Dated:31.12.2025

ಯೋಜನಾ ನಿರ್ದೇಶಕರು
ಹೆಚ್ ಆರ್.ಎಂ.ಎಸ್-2.0, ಆರ್ಥಿಕ ಇಲಾಖೆ